ಕವಿತೆ





ಪ್ರವೀಣ್ ಬಿ.ಎಂ.
ಕಲೆ: ಎಸ್‌ವಿ. ಹೂಗಾರ್

# ಬೇರಿನ ಗುಂಟ



ಬೇರಿನ ಸುಳಿ ಹೊರಚಾಚಿ
ಅಂಕಣಕೆ ಬಡಿದಾಡಿ ಹೊರಟಿದೆ
ಚಿತ್ತ ಹಿಡಿಯುತ್ತ ತೋರುತ್ತಲೇ

ಮೈತುಂಬಾ ಮಣಗಾಯ ಹೊಕ್ಕಿ
ಇದ್ದವು ಅರವತ್ತರ ಪ್ರಾಯ
ಹಿಂದೆ ಓಡಿ ಜಾಡ ಹಿಡಿದು
ಬರುವನು ದೂರ ಕೌತುಕ

ಬೇರು ಎಂದರೆ ತೊಗಲು
ಹರಿದು ಕಡಿದು ಸವರಿ
ಬೇಲಿ ಏರಿ ತಗಲಿಕೊಂಡೇ
ಒಪ್ಪವಾಗಿದೆ ಜಾಗವೂ

ಆಮೇಲಾಮೇಲೆ ಮೈಕುಣಿ, ಕುಣಿದು
ಬಯಲಿಗೆ ಬೆವರಾಗಿ
ಹೊಂಟಿತ್ತು ಗುಣಿಯ ಕಡೆಗೆ

ಹಣೆ ತುಂಬಾ ಹದಿಹರೆ
ಚಂದ್ರನ ಅಂಚಿಗೆ ಗೂಡ ಕಟ್ಟಿದರು
ದೂರದಾಚೆ
ಮತ್ತೆ ಹುಟ್ಟುವಂತೆ